**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆ: 237/2017**

ಹೆಸರು - ಪ್ರಸನ್ನ ಕುಮಾರ್.ಜಿ.ಎಸ್ ಸಿ.ಡಬ್ಲ್ಯೂ: **1**

ವಯಸ್ಸು: 48 **ವರ್ಷ** ಪಿ.ಡಬ್ಲ್ಯೂ: **1**

**ತಂದೆ: ಸಂಜೀವಪ್ಪ**

ಉದ್ಯೋಗ: ಉಪಕಾರ್ಯದರ್ಶಿ, ತೋಟಗಾರಿಕೆ ಇಲಾಖೆ, ಬೆಂಗಳೂರು

ವಾಸ ಸ್ಥಳ - ಬೆಂಗಳೂರು

ಸಾಕ್ಷಿಗೆ ದಿನಾಂಕ: **10-05-2019** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಅಅರವರಿಂದ ಮುಖ್ಯ ವಿಚಾರಣೆ

ದಿ:07-03-2014 ರಿಂದ ದಿ:04-03-2015 ರವರೆಗೆ ಚನ್ನಗಿರಿಯಲ್ಲಿ ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 19-06-2014 ರಂದು ಕೆನರಾ ಬ್ಯಾಂಕ್ ಅಜ್ಜಿಹಳ್ಳಿ ಶಾಖೆಯ ಮ್ಯಾನೇಜರ್ ರವರು ಒಂದು ದೂರನ್ನು ನಮಗೆ ಸಲ್ಲಿಸಿದರು. ಸದರಿ ದೂರಿನಲ್ಲಿ ಮಲ್ಲಿಕಾರ್ಜುನ್ ಬಿನ್ ಠಾಕ್ರ ನಾಯ್ಕ ರವರು ಬೆಳೆ ಸಾಲ ಪಡೆಯಲು ಬ್ಯಾಂಕ್ ಗೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯ ಜೊತೆಗೆ ಮ್ಯುಟೇಶನ್ ಎಂ ಆರ್.72/2005-06 ರನ್ನು ಹಾಜರುಪಡಿಸಿದ್ದು ಸದರಿ ದಾಖಲೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಿಕೊಡಿ ಎಂದು ಮನವಿ ಮಾಡಿದರು. ಸದರಿ ದೂರಿನಲ್ಲಿ ಮಲ್ಲಿಕಾರ್ಜುನ್ ರವರು ಪಿಎಲ್ ಡಿ ಬ್ಯಾಂಕ್ ನಲ್ಲೂ ಸಹ ಸಾಲ ಪಡೆದಿರುವ ಬಗ್ಗೆ ಸಂಶಯ ಇರುತ್ತದೆ ಆದ್ದರಿಂದ ಮ್ಯುಟೇಶನ್ ನ್ನು ಪರಿಶೀಲಿಸಿಕೊಂಡುವಂತೆ ಮನವಿ ಮಾಡಿದ್ದರು.

ಸದರಿ ದೂರಿನ ಪ್ರಕಾರ ನಾವು ಮ್ಯುಟೇಶನ್ ಎಂ ಆರ್.72/2005-06 ರನ್ನು ಕಂಪ್ಯೂಟರ್ ನಲ್ಲಿ ಪರಿಶೀಲಿಸಿದಾಗ ಸರ್ವೆ ನಂ.28 ಪಿ1, ಟಿ.ಮಲ್ಲಿಕಾರ್ಜುನ ಬಿನ್ ಠಾಕ್ರ ನಾಯ್ಕರವರ ಹೆಸರಿನಲ್ಲಿದ್ದು, ವಿಎಸ್ಎಸ್ಎನ್ ರಲ್ಲಿ ರೂ.44,000/-, ಎಂಆರ್.64/1999-2000, ಎಂ. ಆರ್.12/2002-03 ಪಿಎಲ್‌ಡಿಬಿ ಚನ್ನಗಿರಿ ಆದಾರ ವ್ಯವಸ್ಥಾಪಕರು ವಿಎಸ್ಎಸ್ಎನ್ ಸುಣ್ಣಿಗೆರೆರವರಿಗೆ ರೂ.50,000/- ಗೆ ಆದಾರ ಎಂದು ಮ್ಯುಟೇಶನ್ ನಲ್ಲಿ ನಮೂದಾಗಿರುತ್ತದೆ. ಸದರಿ ಮ್ಯುಟೇಶನ್ ನ್ನು ಪರಿಶೀಲಿಸಿದಾಗ ಮಲ್ಲಿಕಾರ್ಜುನ ಬಿನ್ ಠಾಕ್ರ ನಾಯ್ಕ ರವರ ಹೆಸರಿಗೆ ಬದಲಾಗಿ ಶಕುಂತಲಾ ಬಾಯಿ ಕೋಂ ಲೋಕೇಶ್ ನಾಯ್ಕ ಎಂದು ತಪ್ಪು ನಮೂದು ಮಾಡಿರುತ್ತಾರೆ. ಆ ಪ್ರಕಾರ ಸರ್ಕಾರಿ ದಾಖಲೆಗಳನ್ನು ತಿದ್ದುಪಡಿ ಮಾಡಿರುವುದರಿಂದ ಕ್ರಮ ತೆಗೆದುಕೊಳ್ಳಲು ದಿ:20-06-2014 ರಂದು ಚನ್ನಗಿರಿ ಪೊಲೀಸರಿಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ನನ್ನ ಸಹಿ ಇರುತ್ತದೆ. ಸದರಿ ದೂರನ್ನು ನಿಶಾನೆ ಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ 1 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದರಿಂದ

ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ ಹೇ ಕೇ ಸರಿ ಇದೆ.**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,
ಚನ್ನಗಿರಿ